ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Thursday, the 9th July, 1981. Ashada 18, 1903 S.E.

The House met in the Assembly Chamber, Vidhana Soudha at Twelve of the Clock.

[MR. DEPUTY SPEAKER (Sri Bapurao Hulsoorkar) in the Chair.]

STARRED QUESTIONS
(to which oral answers were given)

Construction of new bus stand in Mangalore City

99 SRI ANANDA KUNDA HEGDE (Bramhavar).—

Will the Minister for Transport and Minor Irrigation be pleased to state.–

(a) The stage at which the construction work of new bus stand at Mangalore stands;

(b) Whether estimate for the Udupi bus stand has been prepared;

(c) Whether it has come to the notice of Government that passengers are facing inconvenience due to heavy rush in Mangalore and Udupi bus stands?

SRI M.M.J. SADYOJATHA (Minister for Transport and Minor Irrigation).-

(a) A detailed plan and estimate for the construction of Mangalore Bus stand is being prepared.

(b) No

(c) Yes

ಶ್ರೀ ಆನಂದ ಕುಂದ ಹೆಗ್ಡೆ.—ಅಧ್ಯಕ್ಷರೇ, ನಾವು ನಿರಂತರವಾಗಿ ಕಳೆದ ೩–೪ ವರ್ಷಗಳಿಂದ ಮಂಗಳೂರು ಮತ್ತು ಉಡುಪಿಯಲ್ಲಿ ಬಸ್ ನಿಲ್ದಾಣ ಬೇಕೆಂದು ಕೇಳುತ್ತಲೇ ಇದ್ದೇವೆ. ಆ ಬಸ್ ನಿಲ್ದಾಣಗಳಲ್ಲಿ ಕಾಲನ್ನು ಇಡುವುದಕ್ಕೆ ಆಗುವುದಿಲ್ಲ ಅಷ್ಟು ಕಷ್ಟವಿದೆ. ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳವರ ಪ್ರತಿಕ್ರಿಯೆ ಏನೆಂದು ನಿರೀಕ್ಷಣೆ ಮಾಡಬಯಸುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಮಂಗಳೂರು ಬಸ್ ನಿಲ್ದಾಣಕ್ಕೆ ಈಗಾಗಲೇ ಟೆಂಡರ್‌ನ್ನು ಕರೆದಿದ್ದೇವೆ. ಉಡುಪಿ ಬಸ್ಸ್ ನಿಲ್ದಾಣಕ್ಕೆ ಲಾಂಡ್‌ನ್ನು ಆಕ್ವೈರ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ

ಮಾಡುತ್ತಿದ್ದೇವೆ, ಅದು ಇನ್ನೂ ನಮ್ಮ ಸ್ವಾಧೀನಕ್ಕೆ ಬಂದಿಲ್ಲ ಅದರ ಬಗ್ಗೆ ಮಾತ್ರ ಆಲೋಚನೆ ಮಾಡ ಬೇಕಾಗಿದೆ, ಮಂಗಳೂರಿನ ಬಸ್ ನಿಲ್ದಾಣಕ್ಕಾಗಿ ಈಗಾಗಲೇ ೨೦ ಸಾವಿರ ರೂ.ಗಳ ಎಸ್ಟಿಮೇಟ್ ಆಗಿ ಟೆಂಡರ್‌ನ್ನು ಕರೆದಿದ್ದೇವೆ. ೨೫-೬-೮೧ಕ್ಕೆ ಟೆಂಡರ್‌ನ್ನು ಕರೆದಿದ್ದೇವೆ, ಟೆಂಡರ್ ಒಪ್ಪಿಗೆಯಾದ ನಂತರ ಅಲ್ಲಿ ಕಾರ್ಯ ಪ್ರಾರಂಭವಾಗುತ್ತದೆ.

ಶ್ರೀ ಆನಂದ ಕುಂದ ಹೆಗ್ಡೆ.—೨೦ ಸಾವಿರ ಅಲ್ಲ ೨೦ ಲಕ್ಷವಿರಬೇಕು.

ಶ್ರೀ ಎಂ.ಎಂ.ಜೆ. ಸದ್ಯೋಜಾತ. —೨೦ ಲಕ್ಷ ಹೌದು.

ಶ್ರೀ ಪಿ. ರೊಡ್ರಿಗ್ಸ್.—ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಮಂಗಳೂರಿನಲ್ಲಿ ಜಮೀನನ್ನು ಆಕ್ವೈರ್ ಮಾಡಿಕೊಂಡಿದ್ದೇವೆಂದು ಹೇಳಿದರು ಆದರೆ ಜಮೀನಿನ ಒಕ್ಕಲು ಮೊದಲು ಯಾರಿದ್ದರು ಅವರು ತಮ್ಮ ಮನೆಯನ್ನು ಬಿಟ್ಟುಹೋಗವುದಕ್ಕೆ ತಮಗೆ ಸಾಕಷ್ಟು ಸಮಯ ಕೊಡಲಿಲ್ಲವೆಂದು ಶ್ರೇಷ್ಠ ನ್ಯಾಯಾಲಯಕ್ಕೆ ಹೋಗಿ ಸ್ಟೇ ತಂದಿದ್ದಾರೆ. ಆದುದರಿಂದ ಅವರ ರಿಟ್‌ನ್ನು ಬೇಗನೇ ಇತ್ಯರ್ಥ ಮಾಡಿ, ಅವರು ತಂದಿರತಕ್ಕಂಥ ಸ್ಟೇಯನ್ನು ವೆಕೇಟ್ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈಗಾಗಲೇ ಆ ಜಮೀನು ನಮ್ಮ ಸ್ವಾಧೀನಕ್ಕೆ ಬಂದ ಬಿಟ್ಟಿದೆ. ಅಲ್ಲಿ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಕ್ರಮವನ್ನು ಸಹ ಕೈಗೊಳ್ಳುತ್ತಿದ್ದೇವೆ.

ಶ್ರೀ ಪಿ. ರೊಡ್ರಿಗ್ಸ್.—ನನ್ನ ಪ್ರಶ್ನೆ ಏನೆಂದರೆ ತಾವು ಸ್ವಾಧೀನಕ್ಕೆ ತೆಗೆದುಕೊಂಡಂಥ ಜಮೀನಿನಲ್ಲಿ ಒಕ್ಕಲಿದ್ದವರಿಗೆ ಮನೆಯನ್ನು ಖಾಲಿ ಮಾಡಿ ಹೋಗುವುದಕ್ಕೆ ಸಾಕಷ್ಟು ಸಮಯವನ್ನು ಕೊಡಲಿಲ್ಲ ವೆಂದು ಹೇಳಿ ಅವರು ಕೋರ್ಟಿಗೆ ಹೋಗಿ ರಿಟ್ ದಾಖಲೆ ಮಾಡಿದ್ದಾರೆ. ಆದುದರಿಂದ ಆ ರಿಟ್‌ನ್ನು ಬೇಗನೆ ಇತ್ಯರ್ಥ ಮಾಡುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅವರು ತಡೆಯಾಜ್ಞೆ ತಂದಿರುವ ವಿಷಯ ನನಗೆ ಗೊತ್ತಿಲ್ಲ, ಹಾಗೇನಾದರೂ ಇದ್ದರೆ ಅದನ್ನು ವೆಕೇಟ್ ಮಾಡುವುದಕ್ಕೆ ಆದಷ್ಟು ಜಾಗ್ರತೆ ಕ್ರಮ ಕೈಗೊಳ್ಳುತ್ತೇವೆ,

ಶ್ರೀ ಆನಂದ ಕುಂದ ಹೆಗಡೆ. —ಉಡುಪಿ ಬಸ್ ನಿಲ್ದಾಣ ಕೂಡ ಬಹಳ ನಿಧಾನವಾಗುತ್ತಿದೆ. ಅದಕ್ಕೆ ತಾವು ಸ್ವಲ್ಪ ಕ್ಷಿಪ್ರವಾಗಿ ಅಂದಾಯ ಪಟ್ಟಿಯನ್ನು ತಯಾರು ಮಾಡಿ ಮತ್ತು ಅಲ್ಲಿ ಸ್ಥಳವನ್ನು ಸಹ ಆದಷ್ಟು ಜಾಗ್ರತೆ ಆಕ್ವೈರ್ ಮಾಡಿಕೊಂಡು ಬಸ್ ನಿಲ್ದಾಣವನ್ನು ಮಾಡುವ ಸಾಧ್ಯತೆ ಇದೆಯೇ ಎಂದು ಕೇಳುತ್ತೇನೆ ಸ್ವಾಮಿ.—

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಮಾನ್ಯ ಸದಸ್ಯರು ಅಲ್ಲಿ ಸ್ಥಳವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿದರೆ ಆದಷ್ಟು ಜಾಗ್ರತೆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

Moderanisation of V.C. Channel

376 Sri M.S. Athmananda (Mandya),—Will the Minister ofState for Major and Medium Irrigation be pleased to state:-

(a) Whether, the Government has approved the Modernisation of Visveswarairh Channel;

(b) if so;

(i) The total estimated cost of the work;

(ii) When the work was tkean up;

(iii) The amount spent on the scheme hither to?